ಯಾರು ಇಸ್ಲಾಮ್ ಸ್ವೀಕರಿಸಿದನೋ (ಅಥವಾ ಅಲ್ಲಾಹುವಿಗೆ ಶರಣಾದನೋ), ಮತ್ತು ಅವನ ಅಗತ್ಯಕ್ಕೆ ತಕ್ಕಷ್ಟು (ಹೆಚ್ಚೂ ಇಲ್ಲದೆ, ಕಡಿಮೆಯೂ ಇಲ್ಲದೆ) ಅವನಿಗೆ ಜೀವನೋಪಾಯವನ್ನು ಒದಗಿಸಲಾಗಿದೆಯೋ, ಮತ್ತು ಅಲ್ಲಾಹು ಅವನಿಗೆ ನೀಡಿದ್ದರಲ್ಲಿ ಅವನು ಸಂತೃಪ್ತನಾಗುವಂತೆ ಮಾಡಿದ್ದಾನೋ (ಅವನು ಅದರಲ್ಲಿ ತೃಪ್ತನಾದನೋ) ಅವನು ಖಂಡಿತವಾಗಿಯೂ ಯಶಸ್ವಿಯಾದನು (ವಿಜಯಿಯಾದನು)

ಅಬ್ದುಲ್ಲಾ ಬಿನ್ ಅಮ್ರ್ ಬಿನ್ ಆಸ್ (ಅಲ್ಲಾಹು ಅವರಿಬ್ಬರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಅಲ್ಲಾಹುವಿನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹುವಿನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: "ಯಾರು ಇಸ್ಲಾಮ್ ಸ್ವೀಕರಿಸಿದನೋ (ಅಥವಾ ಅಲ್ಲಾಹುವಿಗೆ ಶರಣಾದನೋ), ಮತ್ತು ಅವನ ಅಗತ್ಯಕ್ಕೆ ತಕ್ಕಷ್ಟು (ಹೆಚ್ಚೂ ಇಲ್ಲದೆ, ಕಡಿಮೆಯೂ ಇಲ್ಲದೆ) ಅವನಿಗೆ ಜೀವನೋಪಾಯವನ್ನು ಒದಗಿಸಲಾಗಿದೆಯೋ, ಮತ್ತು ಅಲ್ಲಾಹು ಅವನಿಗೆ ನೀಡಿದ್ದರಲ್ಲಿ ಅವನು ಸಂತೃಪ್ತನಾಗುವಂತೆ ಮಾಡಿದ್ದಾನೋ (ಅವನು ಅದರಲ್ಲಿ ತೃಪ್ತನಾದನೋ) ಅವನು ಖಂಡಿತವಾಗಿಯೂ ಯಶಸ್ವಿಯಾದನು (ವಿಜಯಿಯಾದನು) ".
[صحيح] [رواه مسلم]

ಪ್ರವಾದಿಯವರು (ಅವರ ಮೇಲೆ ಅಲ್ಲಾಹುವಿನ ಕೃಪೆ ಮತ್ತು ಶಾಂತಿಯಿರಲಿ) ಇಲ್ಲಿ ವಿವರಿಸುವುದೇನೆಂದರೆ, ಯಾರು ತನ್ನ ಪರಿಪಾಲಕನಿಗೆ (ಅಲ್ಲಾಹುವಿಗೆ) ಶರಣಾಗಿ, ಇಸ್ಲಾಮಿನ ಕಡೆಗೆ ಮಾರ್ಗದರ್ಶನವನ್ನು ಪಡೆದನೋ, ಮತ್ತು ಹಲಾಲ್ (ಧರ್ಮಸಮ್ಮತ) ಮಾರ್ಗದಿಂದ ತನ್ನ ಅಗತ್ಯಕ್ಕೆ ತಕ್ಕಷ್ಟು, ಹೆಚ್ಚೂ ಇಲ್ಲದೆ ಕಡಿಮೆಯೂ ಇಲ್ಲದೆ, ಜೀವನೋಪಾಯವನ್ನು ಪಡೆದನೋ, ಮತ್ತು ಅಲ್ಲಾಹು ತಾನು ನೀಡಿದ್ದರಲ್ಲಿ ಅವನನ್ನು ಸಂತೃಪ್ತನನ್ನಾಗಿ ಮತ್ತು ಸಂತುಷ್ಟನನ್ನಾಗಿ ಮಾಡಿದನೋ ಅವನು ಖಂಡಿತವಾಗಿಯೂ ಗೆದ್ದನು ಮತ್ತು ಯಶಸ್ವಿಯಾದನು.

http://www.sunnah.global/hadeeth/kn/show/5814